**ಸಾಕ್ಷಿಯನ್ನು ದಿನಾಂಕಃ 19.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಆರೋಪಿಗಳ ಪರ ಶ್ರೀ ಎಸ್.ಬಿ, ವಕೀಲರಿಂದಃ**

ಮೈಸೂರು-ಕಾಳಿಹುಂಡಿ ಮಾರ್ಗದಲ್ಲಿ 2012 ರಿಂದ 2014 ರವರೆಗೆ ಹೋಗಿ ಬರುವುದು ಮಾಡಿರುತ್ತೇನೆ. ಚಾಸಾ-2 ರವರು ಕೂಡ ನಮ್ಮ ಜೊತೆ ಇದ್ದರು, ಆದರೆ ಅವರು ನಿರಂತರವಾಗಿರಲಿಲ್ಲ. ಮೈಸೂರಿನಿಂದ ಕಾಳಿಹುಂಡಿಗೆ ಬಸ್ ಮೂಲಕ ಹೋಗಲು 1 ಗಂಟೆ 40 ನಿಮಿಷ ಬೇಕಾಗುತ್ತದೆ. ಹೊಮ್ಮರಗಳ್ಳಿಯಿಂದ ಕಾಳಿಹುಂಡಿಗೆ ಹೋಗುವಾಗ ಸಾಕಷ್ಟು ಜನ ಪ್ರಯಾಣಿಕರು, ವಿದ್ಯಾರ್ಥಿಗಳು ಬಸ್ಸನ್ನು ಹತ್ತುತ್ತಾರೆ ಎಂದರೆ ಸರಿ. ಕಾಳಿಹುಂಡಿಗೆ ಹೋಗುವಾಗ ಇಬ್ಜಾಲ ಗ್ರಾಮಕ್ಕೆ ಹೋಗುವ ಪೂರ್ವದಲ್ಲಿ ಒಂದು ತಿರುವು ಇರುತ್ತದೆ ಎಂದರೆ ಸರಿ. ಸದರಿ ತಿರುವಿನಿಂದ ಬಸ್ ಸ್ಟ್ಯಾಂಡ್ ಗೆ ಸುಮಾರು 30 ಮೀಟರ್ ಇರುತ್ತದೆ. ಕೆ.ಎಸ್.ಆರ್.ಟಿ.ಸಿ ಬಸ್ 40 ಮೀಟರ್ ಉದ್ದ ಇರುತ್ತದೆ. ಸದರಿ ತಿರುವಿನ ಎರಡು ಕಡೆಗಳಲ್ಲಿಯೂ ಡ್ರೈನೇಜ್ ಇರುತ್ತದೆ ಎಂದರೆ ಸರಿ. ಸದರಿ ರಸ್ತೆ ಚಿಕ್ಕದಿರುವುದರಿಂದ ಹಾರ್ನ್ ಮಾಡಿಕೊಂಡೇ ಚಾಲನೆ ಮಾಡಬೇಕಾಗುತ್ತದೆ ಎಂದರೆ ಅವಶ್ಯಕತೆ ಇದ್ದಾಗ ಮಾಡಬೇಕಾಗುತ್ತದೆ. ಆ ಮಾರ್ಗದಲ್ಲಿ ಯಾವಾಗಲೂ ಹಾರ್ನ್ ಮಾಡಿಕೊಂಡೇ ಚಾಲನೆ ಮಾಡುತ್ತಾ ಕಿರಿ-ಕಿರಿ ಉಂಟು ಮಾಡುತ್ತಿದ್ದರಿಂದ ನನಗೆ ಸಾಕಷ್ಟು ಬಾರಿ ಬುದ್ಧಿವಾದ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಸದರಿ ರಸ್ತೆಯ ಅಕ್ಕ-ಪಕ್ಕದಲ್ಲಿ ಅಂಗಡಿಗಳು ಇರುತ್ತವೆ ಎಂದರೆ ಸರಿ. ಅಂಗಡಿ ಮುಂಭಾಗದಲ್ಲಿ ಸಾಕಷ್ಟು ಜನರು ಇರುತ್ತಾರೆ ಎಂದರೆ ಸರಿ. ದಿನಾಂಕ 29.09.2014 ರಂದು ಕಾಳಿಹುಂಡಿ ಗ್ರಾಮಕ್ಕೆ ಹೋಗುವ ಮಾರ್ಗದಲ್ಲಿ ಇಬ್ಜಾಲ ರಸ್ತೆಯ ಎದುರುಗಡೆ ಗ್ರಾಮದ ಜನರು ಜಾನುವಾರುಗಳನ್ನು ಹೊಡೆದುಕೊಂಡು ಬರುತ್ತಿದ್ದರು ಎಂದರೆ ಎತ್ತಿನಗಾಡಿಯಲ್ಲಿ ಭತ್ತದ ಮೂಟೆಗಳನ್ನು ಇಳಿಸುತ್ತಿದ್ದರು. ಆ ದಿವಸ ನಾನು ಹಾರ್ನ್ ಮಾಡುತ್ತಿದ್ದಾಗ ಈ ರೀತಿ ಹಾರ್ನ್

ಮಾಡಬೇಡಿ, ಎತ್ತುಗಳು ಎದುರುತ್ತವೆ ಎಂದು ಹೇಳಿರುತ್ತಾರೆ ಎಂದರೆ ಸರಿ. ಆ ದಿವಸ ನಾನು ಮೈಸೂರಿನಿಂದ ಹೊರಡುವಾಗ ತಡವಾಗಿ ಹೊರಟಿರುತ್ತೇನೆ ಎಂದರೆ ಸರಿಯಲ್ಲ. ಆ ಕಾರಣದಿಂದ ಬೇಗ ಹೊರಡುವ ಉದ್ದೇಶದಿಂದ ಬಸ್ಸನ್ನು ವೇಗವಾಗಿ ಚಾಲನೆ ಮಾಡುತ್ತಾ ಹಲವು ಬಾರಿ ಹಾರ್ನ್ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆ ದಿವಸ ಬಸ್ಸಿನಿಂದ ಕೆಳಗೆ ಇಳಿದಿರುವುದಿಲ್ಲ. ನಾನು ನಿಲ್ಲಿಸಿದ ಬಸ್ಸಿನ ಅಕ್ಕ-ಪಕ್ಕದಲ್ಲಿ ನೀರು ಹೋಗಲು ದೊಡ್ಡ ಚರಂಡಿ ಇರುತ್ತದೆ ಎಂದರೆ ಸರಿ. ನಾನು ಆ ದಿವಸ ಹೋಗಲು ತಡವಾಗುತ್ತದೆ, ಎತ್ತಿನ ಗಾಡಿ ತೆಗೆಯಿರಿ ಎಂದು ನಾನೇ ಅವರ ಮೇಲೆ ಗಲಾಟೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆ ದಿವಸ ಬಸ್ಸಿನಲ್ಲಿಯೇ ಇದ್ದುದರಿಂದ ಆರೋಪಿಗಳು ಬಂದು ನನ್ನ ಜೊತೆ ಯಾವುದೇ ಗಲಾಟೆ ಮಾಡಿಲ್ಲ ಮತ್ತು ಯಾವುದೇ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. 3 ನೇ ಆರೋಪಿ ಇಬ್ಜಾಲ ಗ್ರಾಮದ ಮುಖ್ಯರಸ್ತೆಯಲ್ಲಿ ಪೆಟ್ಟಿಗೆ ಅಂಗಡಿ ಇಟ್ಟುಕೊಂಡು ಟೀ ವ್ಯಾಪಾರ ಮಾಡುತ್ತಾರೆ ಎಂದರೆ ಸರಿ. 2 ನೇ ಆರೋಪಿ ಕೂಡ ಮೈಸೂರಿನ ಚಾಮುಂಡಿ ಬೆಟ್ಟದಲ್ಲಿ ಪೂಜೆ ಮಾಡುವ ವಸ್ತುಗಳ ವ್ಯಾಪಾರ ಮಾಡುತ್ತಾರೆ ಎಂದರೆ ಸರಿ. ಆ ದಿವಸ ಆರೋಪಿಗಳು ಸ್ಥಳದಲ್ಲಿರಲಿಲ್ಲ, ಅವರ ಊರಿನಲ್ಲಿದ್ದರು ಎಂದರೆ ಸರಿಯಲ್ಲ. ಆರೋಪಿಗಳು ಆ ದಿವಸ ಬಸ್ಸಿನಲ್ಲಿ ಇರಲಿಲ್ಲ ಎಂದರೆ ಬಸ್ ಒಳಗಡೆ ಬಂದು ಹೊಡೆದಿರುತ್ತಾರೆ. ನಾನು ಬೇಗ ಹೋಗಿ ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸುವ ಉದ್ದೇಶದಿಂದ ಹಲವು ಬಾರಿ ಹಾರ್ನ್ ಮಾಡಿಕೊಂಡು ವೇಗವಾಗಿ ಚಾಲನೆ ಮಾಡಿ ಗ್ರಾಮಸ್ಥರ ಮೇಲೆ ಗಲಾಟೆ ಮಾಡಿ ಆರೋಪಿಗಳ ವಿರುದ್ಧ ಸುಳ್ಳು ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಆ ದಿವಸ ಯಾವುದೇ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

ಪಿ.ಡಬ್ಲ್ಯು-01

**<u>ಮರುವಿಚಾರಣೆಃ</u>** ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**

**ನಂಜನಗೂಡು.**